ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ನೇತ್ರಾವತಿ ಸೇತುವೆ ನಿರ್ಮಾಣಕ್ಕೆ ಯಾವುದೇ ಜಮೀನನ್ನು ಸ್ವಾಧೀನ ಪಡಿಸಿಕೊಂಡಿಲ್ಲ. ಆದರೆ ಪ್ರಸ್ತುತ ನೇತ್ರಾವತಿ ಸೇತುವೆ ನಿರ್ಮಾಣದ ಬಳಿ ಸಮೀಪ್ಯಾರಸ್ತೆ ನಿರ್ಮಿಸಲು 32 ಎಕರೆ 45 ಸೆಂಟ್ಸ್ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ.

ಆ) ಹೌದು.

ಇ) ಉದ್ಭವಿಸುವುದಿಲ್ಲ.

ಕರ್ನಾಟಕ ಸರ್ಕಾರದ ಭೂದಾಖಲೆಗಳ ಇಲಾಖೆಯಲ್ಲಿಯ ಹಂಗಾಮಿ ಹುದ್ದೆಗಳನ್ನು ಖಾಯಂಗೊಳಿಸುವ ಬಗ್ಗೆ

2910 - ಶ್ರೀ ಎ.ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಸರ್ಕಾರದ ಭೂದಾಖಲೆಗಳ ಇಲಾಖೆಯಲ್ಲಿ ಒಟ್ಟು ಹಂಗಾಮಿ ಹುದ್ದೆಗಳು ಎಷ್ಟು?

ಆ) ಆ ಹುದ್ದೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರು ಖಾಯಂ ನೌಕರರೇ?

ಇ) ಈ ಹಂಗಾಮಿ ಹುದ್ದೆಗಳು ಎರಡು ವರ್ಷಗಳಿಗೊಮ್ಮೆ ಮಂಜೂರಾಗಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಇದರಿಂದ ನೌಕರರಿಗೆ ಆನಾವಶ್ಯಕ ಮಾನಸಿಕ ತೊಂದರೆ ಉಂಟಾಗುವುದಿಲ್ಲವೇ?

ಉ) ಈ ಹಂಗಾಮಿ ಹುದ್ದೆಗಳು 1-3-91 ರಿಂದ ಮಂಜೂರಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಹಾಗಿದ್ದಲ್ಲಿ ಆ ಹುದ್ದೆಗಳನ್ನು ಕೂಡಲೇ ಖಾಯಂಗೊಳಿಸಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) 2878.

ಆ) ಇಲ್ಲ.

ಇ) ಹೌದು.

ಈ) ಇಲ್ಲ.

ಉ) ಮಂಜೂರಾಗಿದೆ.

ಊ) ಈ ಹುದ್ದೆಗಳನ್ನು ಖಾಯಂಗೊಳಿಸಲು ಈಗಿನ ಆದೇಶಗಳ ನಿಯಮಗಳ ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಸ್ಮಶಾನಕ್ಕೆ ಭೂಮಿಯನ್ನು ಕಾದಿರಿಸುವುದು

3548 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಹೆಚ್ಚಿನ ಗ್ರಾಮಗಳಲ್ಲಿ ಸ್ಮಶಾನದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದರಿಂದ ಬಡವರು ಕಷ್ಟನಷ್ಟಗಳನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇದನ್ನು ಪರಿಹರಿಸಲು ಎಲ್ಲಾ ಗ್ರಾಮಗಳಲ್ಲಿ ಜನರಿಗೆ ಅನುಕೂಲವಾಗುವಂತೆ ಅದಷ್ಟು ಹೆಚ್ಚಿಗೆ ಸ್ಮಶಾನಗಳಿಗೆ ಭೂಮಿಯನ್ನು ಕಾದಿರಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದೇ?